**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು**

**ಸಿಸಿ ಸಂಖ್ಯೆ: 1133/2018**

ಪಿರ್ಯಾದುದಾರರು : ಹುಲ್ಲಹಳ್ಳಿ ಠಾಣೆ, ನಂಜನಗೂಡು

ವಿರುದ್ಧ

ಆರೋಪಿಗಳು : 1. ಶಿವನಂಜೇಗೌಡ ಬಿನ್ ಲೇಟ್ ನಂಜೇಗೌಡ, 50 ವರ್ಷ,

2. ಮಹದೇವೆಗೌಡ ಬಿನ್ ಲೇಟ್ ನಂಜೇಗೌಡ, 60 ವರ್ಷ,

ವಾಸಃ ಹುಲ್ಲಹಳ್ಳಿ ಗ್ರಾಮ, ನಂಜನಗೂಡು ತಾಲ್ಲೂಕು.

*****

**:: ದೋಷಾರೋಪಣೆ ::**

*ಶ್ರೀ ರಘುರಾಮ ಎನ್. ಎಸ್.,* ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ದಿನಾಂಕ 03.09.2017 ರಂದು ಮದ್ಯಾಹ್ನ 2.00 ಗಂಟೆ ಸಮಯದಲ್ಲಿ ಹುಲ್ಲಹಳ್ಳಿ ಪೋಲಿಸ್ ಠಾಣಾ ವ್ಯಾಪ್ತಿಗೆ ಸೇರಿದ ಕಣೇನೂರು ಗ್ರಾಮದ ಸರ್ವೆ ನಂ.30/3 ರ ಜಮೀನಿನಲ್ಲಿ ಚಾಸಾ-1 ರವರು ತಮ್ಮ ಮುಸುಕಿನ ಜೋಳದ ಫಸಲಿಗೆ ನೀರು ಲೀಕ್ ತೊಂದರೆ ಆಗಿರುವ ವಿಚಾರವನ್ನು ಕೇಳಿದಾಗ ಆರೋಪಿಗಳಾದ ನೀವು ಚಾಸಾ-1 ರವರ ಮೇಲೆ ಏಕಾಏಕಿ ಗಲಾಟೆ ಮಾಡಿ ಬೋಳಿಮಗನೆ ನಾವು ಇದೇ ರೀತಿಯಾಗಿ ನೀರನ್ನು ತೆಗೆದುಕೊಳ್ಳುತ್ತೇವೆ ನೀನು ಏನು ಮಾಡುತ್ತೀಯಾ ಮಾಡಿಕೊ

ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಉಂಟು ಮಾಡಿರುವ ಕಾರಣ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ ಅದೇ ದಿನ, ವೇಳೆ ಹಾಗೂ ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಗಲಾಟೆ ಮಾಡಿ, 1 ನೇ ಆರೋಪಿಯಾದ ನೀವು ಚಾಸಾ-1 ರವರ ತಬ್ಬಿ ಹಿಡಿದುಕೊಂಡು ಅಕ್ರಮ ತಡೆಯುಂಟು ಮಾಡಿರುವ ಕಾರಣ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೂರನೆಯದಾಗಿ ಅದೇ ದಿನ, ವೇಳೆ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಗಲಾಟೆ ಮಾಡಿ, 1 ನೇ ಆರೋಪಿಯಾದ ನೀವು ಚಾಸಾ-1 ರವರ ಬಲದ ಕೆನ್ನೆ ಬಳಿ ಕಣ್ಣುಗೂಡಿಗೆ ಬಲವಾಗಿ ಹೊಡೆದಿದ್ದು, ತಲೆಯ ಹತ್ತಿರ ಬಲ ಕಿವಿ ಬಳಿ ಹೊಡೆದು ನೋವುಂಟು ಮಾಡಿ ತೀವ್ರ ಸ್ವರೂಪದ ಗಾಯಗಳಾಗಿರುವ ಕಾರಣ ಭಾರತೀಯ ದಂಡ ಸಂಹಿತೆ ಕಲಂ 326 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಎಸಗಿರುವಿರೆಂದು ಆರೋಪಿಸಲಾಗಿದೆ.

ನಾಲ್ಕನೆಯದಾಗಿ ಅದೇ ದಿನ, ವೇಳೆ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಗಲಾಟೆ ಮಾಡಿ, 2 ನೇ ಆರೋಪಿತರಾದ ನೀವು ಕೈಗಳಿಂದ ಚಾಸಾ-1 ರವರ ಮೈಕೈಗೆ ಗುದ್ದಿ ಕಾಲಿನಿಂದ ಒದ್ದು ನೋವುಂಟು ಮಾಡಿರುವ ಕಾರಣ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಎಸಗಿರುವಿರೆಂದು ಆರೋಪಿಸಲಾಗಿದೆ.

ಕೊನೆಯದಾಗಿ ಅದೇ ದಿನ, ವೇಳೆ ಹಾಗೂ ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಗಲಾಟೆ ಮಾಡಿ, ಚಾಸಾ-1 ರವರಿಗೆ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿರುವ ಕಾರಣ ಕಾರಣ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ನಿಮ್ಮ ಮೇಲಿನ ಆರೋಪಣೆಯ ಬಗ್ಗೆ ವಿಚಾರಣೆಯಾಗಲು ಈ ಮೂಲಕ ಆದೇಶಿಸುತ್ತೇನೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ.,
ನಂಜನಗೂಡು